ಓ. ಎಸ್. ನಂಃ 84/2021

**ಪಿ.ಡಬ್ಲ್ಯೂಃ 1**

**ದಿನಾಂಕಃ 01-07-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 31 ನೇ ಪ್ರತಿವಾದಿಯ ಪರ ಶ್ರೀ ವಿ. ವಿ. ಎಂ. ವಕೀಲರಿಂದಃ**

4 ನೇ ವಾದಿ ಗಂಗಮ್ಮಳಿಗೆ ಈಗ 68 ವರ್ಷ. 5 ನೇ ವಾದಿ ರೂಪಾಳಿಗೆ ಈಗ 57 ವರ್ಷ. ದಾವೆ ಸಲ್ಲಿಸುವಾಗ 5 ನೇ ವಾದಿ ರೂಪಾಳಿಗೆ 57 ವರ್ಷಗಳು ಎಂದು ಬರೆಸಿದ್ದೇವೆ ಎಂದರೆ ಸರಿ. ಸದರಿ ವಯಸ್ಸನ್ನು ಪರಿಗಣಿಸಿದರೆ ರೂಪಾ ಅವರಿಗೆ 63 ವರ್ಷಗಳು ಎಂದರೆ ದಾವೆಯಲ್ಲಿ ಬರೆಸಿದ್ದನ್ನು ನೆನಪಿಟ್ಟುಕೊಂಡಿದ್ದೆ. ದಾವೆ ಬರೆಸಲು ನಾನು, ನನ್ನ ಚಿಕ್ಕಮ್ಮ ಗಂಗಮ್ಮ ಹಾಗೂ ರೂಪಾ ಬಂದಿದ್ದೇವು. ನಮ್ಮ ಜೊತೆ ಲಕ್ಷ್ಮಣ ಸಹ ಬಂದಿದ್ದ ಎಂದರೆ ಸರಿಯಲ್ಲ. ಗಂಗಮ್ಮ ಹಾಗೂ ರೂಪಾ ಅವರಿಗೆ ವಯಸ್ಸಾಗಿದೆ, ಅವರು ಮನೆಯಲ್ಲಿರುತ್ತಾರೆ, ಅವರು ಊಟ ಉಪಚಾರ ಮಾಡುತ್ತಾರೆ. ಮನೆಯಲ್ಲಿ ಮಕ್ಕಳು ಮತ್ತು ಮೊಮ್ಮಕ್ಕಳೊಂದಿಗೆ ಆಡುತ್ತಾರೆ ಎಂದರೆ ಸರಿ.

2. ನನ್ನ ವಾದ ಪತ್ರದ ಖಂಡಿಕೆ 11 ರಲ್ಲಿ 1 ನೇ ಪ್ರತಿವಾದಿ ಲಕ್ಷ್ಮಣ ಈತನು ರಿ ಸ ನಂಃ 49/2 ಕ ರಲ್ಲಿ 2 ಎಕರೆ 9 ಗುಂಟೆ ಪೈಕಿ ದಕ್ಷಿಣ ಭಾಗದ 1 ಎಕರೆ ಕ್ಷೇತ್ರವನ್ನು 2003 ರಲ್ಲಿ 4 ನೇ ವಾದಿ ಗಂಗಮ್ಮ ಅವರಿಗೆ ಹಾಗೂ ಉಳಿದ 1 ಎಕರೆ 9 ಗುಂಟೆ ಜಮೀನನ್ನು ದಿಃ 02-03-2015 ರಂದು ದಾನ ಪತ್ರದ ಮೂಲಕ 5 ನೇ ವಾದಿ ರೂಪಾಳಿಗೆ ವರ್ಗಾವಣೆ ಮಾಡಲಾಗಿದೆ ಎಂದು ಬರೆಸಿದ್ದೇವೆ ಎಂದರೆ ಸರಿ. ಸದರಿ ಜಮೀನುಗಳನ್ನು ದಾನ ಕೊಡುವ ಮುಂಚೆ 1 ನೇ ಪ್ರತಿವಾದಿ ಲಕ್ಷ್ಮಣ ಅವರಿಗೆ ಮಾವಿನತೋಪ ಗ್ರಾಮದ ಡ ನಂಃ 1884 ರಂತೆ ಲಕ್ಷ್ಮಣ ಅವರು ಕಂದಾಯ ದಾಖಲೆಗಳಲ್ಲಿ ನಮೂದಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳನ್ನು ದಾನ ಕೊಡುವ ಮುಂಚೆ 1 ನೇ ಪ್ರತಿವಾದಿ ಲಕ್ಷ್ಮಣ ಅವರಿಗೆ ಮಾವಿನತೋಪ ಗ್ರಾಮದ ಡ ನಂಃ 1884 ರಂತೆ ಲಕ್ಷ್ಮಣ ಅವರು ಕಂದಾಯ ದಾಖಲೆಗಳಲ್ಲಿ ನಮೂದಾಗಿತ್ತು ಎನ್ನುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಸದರಿ ದಾನ ಪತ್ರದ ಪ್ರಕಾರ 4 ಮತ್ತು 5 ನೇ ವಾದಿಗಳು ಸಂಪೂರ್ಣ ಮಾಲಿಕರಾಗಿದ್ದಾರೆಂದು ಬರೆಸಿದ್ದೇವೆ ಎಂದರೆ ಸರಿ. ಹೀಗೆ ದಾನ ಕೊಟ್ಟಂತಹ ಆಸ್ತಿಗಳು 1 ನೇ ಪ್ರತಿವಾದಿ ಲಕ್ಷ್ಮಣ ಅವರಿಗೆ ಈಗ ನನಗೆ ತೋರಿಸಿದ ದಾಖಲೆಯ ಪ್ರಕಾರ ಸದರಿ ಆಸ್ತಿಗಳು ಲಕ್ಷ್ಮಣ ಹೆಸರಿಗೆ ಬಂದಿದ್ದವು ಎಂದರೆ ಸರಿ. ಸಾಕ್ಷಿ ಸದರಿ ದಾಖಲೆ ಒಪ್ಪಿದ್ದರಿಂದ ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ಸದರಿ ದಾಖಲೆಯು ನಮ್ಮ ಅಜ್ಜ ವೀರಪ್ಪ ಅವರು ಜೀವಂತವಿದ್ದ ಕಾಲದಲ್ಲಿ ಆಗಿದೆ ಎಂದರೆ ಸರಿ. ಸದರಿ ದಾಖಲೆಯ ಪ್ರಕಾರ 2003 ನೇ ಇಸವಿಯಲ್ಲಿ ವೀರಪ್ಪ 1 ನೇ ಪಾರ್ಟಿಯಾಗಿ, ನಮ್ಮ ಚಿಕ್ಕಮ್ಮ ಗಂಗಮ್ಮ 2 ನೇ ಪಾರ್ಟಿಯಾಗಿ, ನಮ್ಮ ಮಾವ ಮೃತ ಲಕ್ಷ್ಮಪ್ಪ 3 ನೇ

ಪಾರ್ಟಿಯಾಗಿ ಮಾವಿನತೋಪ ಗ್ರಾಮದ ಸರ್ವೇ ನಂಃ 49/2ಕ ಪೈಕಿ, 49/1 ಪೈಕಿ ಹಾಗೂ ಬಡಸಂಗಾಪುರ ಗ್ರಾಮದ ಸರ್ವೇ ನಂಃ 55/1+2+3 ಪೈಕಿ ಆಸ್ತಿಗಳನ್ನು ವೀರಪ್ಪ ಜೀವಂತ ಇದ್ದ ಕಾಲಕ್ಕೆ ಗಂಗಮ್ಮ, ವೀರಪ್ಪ ಹಾಗೂ ಲಕ್ಷ್ಮಪ್ಪ ವಡ್ಡರ ಆಸ್ತಿಗಳನ್ನು ಭಾಗ ಮಾಡಿಕೊಂಡ ದಾಖಲೆ ಎಂದರೆ ಸರಿ. ಸದರಿ ದಾಖಲೆಯ ಪ್ರಕಾರ ಸರ್ವೇ ನಂಃ 49/2ಕ ರಲ್ಲಿ 1 ಎಕರೆ ಜಮೀನನ್ನು ಗಂಗಮ್ಮ ಹಿಸ್ಸೆಯ ಎಂದು ಪಡೆದಿದ್ದಾಳೆ ಎಂದರೆ ಸರಿ.

3. ಸದರಿ ದಾಖಲೆಯ ಪ್ರಕಾರ ಪಾರ್ಟಿ ನಂಃ 3 ಲಕ್ಷ್ಮಪ್ಪ ಅವರಿಗೆ ಸರ್ವೇ ನಂಃ 49/2 ರಲ್ಲಿ 3 ಎಕರೆ 11 ಗುಂಟೆಯ ಪೈಕಿ 2 ಎಕರೆ 9 ಗುಂಟೆ ಇದರಲ್ಲಿ ಉತ್ತರ ಭಾಗದ 1 ಎಕರೆ 9 ಗುಂಟೆ ಹಾಗೂ 49/1ರ ಪೈಕಿ 7 ಎಕರೆ 17 ಗುಂಟೆ 8 ಆಣೆ ಈ ಪ್ರಕಾರದ ಆಸ್ತಿಯಲ್ಲಿ ಉತ್ತರ ಭಾಗದ 5 ಎಕರೆ 37 ಗುಂಟೆ 8 ಆಣೆ ಇದು ಪೂರಾ ಹಾಗೂ ಬಡಾಸಂಗಾಪುರ ಗ್ರಾಮದ ಸರ್ವೇ ನಂಃ 55/1+2+3 ರಲ್ಲಿ 7 ಎಕರೆ 22 ಗುಂಟೆ ಇದು ಪೂರಾ ಲಕ್ಷ್ಮಣ ಈತನ ಹಿಸ್ಸಾಕ್ಕೆ ಬಂದಿದೆ ಎಂದರೆ ಸರಿ. ಈ ರೀತಿ ಹಿಸ್ಸಾ ಮಾಡಿಕೊಂಡು ಕಂದಾಯ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಮಾವಿನತೋಪ ಗ್ರಾಮದ ಸರ್ವೇ ನಂಃ 49ರ ಕಂದಾಯ ದಾಖಲೆಗಳಲ್ಲಿ ಜಾರಿಗೆ ತಂದರು ಎಂದರೆ ಗೊತ್ತಿಲ್ಲ.

4. ಆ ಕಾಲಕ್ಕೆ ವೀರಪ್ಪ ಜೀವಂತ ಇದ್ದಾನೆಂದು ಬಡಾಸಂಗಾಪುರ ಗ್ರಾಮದ ಸರ್ವೇ ನಂಃ 55/1+2+3 ಆಸ್ತಿಯಲ್ಲಿ ಲಕ್ಷ್ಮಪ್ಪನ ಹಿಸ್ಸೆಗೆ ತೆಗೆದರೂ ಸಹ ನಾಮ ಮಾತ್ರಕ್ಕೆ ವೀರಪ್ಪನ ಹೆಸರು ಮುಂದುವರೆಸಿದರು ಎಂದರೆ ಗೊತ್ತಿಲ್ಲ. ಬಡಾಸಂಗಾಪುರ ಗ್ರಾಮದ ಸರ್ವೇ ನಂಃ 55/1+2+3 ಆಸ್ತಿಯಲ್ಲಿ ಲಕ್ಷ್ಮಪ್ಪನ ಹಿಸ್ಸೆಗೆ ತೆಗೆದಿದ್ದರಿಂದ ವೀರಪ್ಪ ಜೀವಂತವಿದ್ದಾಗಲೇ ಆತನ ಆಸ್ತಿಯಾಗಿ ಉಳಿದಿರಲಿಲ್ಲವೆಂದರೆ ಸರಿಯಲ್ಲ.

5. ನಾವು ದಾವೆ ಸಲ್ಲಿಸುವಾಗ ಈಗ ನನಗೆ ತೋರಿಸಿದ ನಿಡಿ-1 ದಾಖಲೆಯನ್ನು ಹಾಜರು ಪಡಿಸಿಲ್ಲವೆಂದರೆ ಸರಿ. ನಮ್ಮ ಅಜ್ಜ ವೀರಪ್ಪ ಜೀವಂತವಿದ್ದಾಗಲೇ ಮೇಲೆ ಹೇಳಿದ ಸರ್ವೇ ನಂಃ 49 ಹಾಗೂ 55 ರಲ್ಲಿ ಹಿಸ್ಸೆಯಾಗಿರುವುದರಿಂದ ಅದನ್ನು ನ್ಯಾಯಾಲಯದ ಗಮನಕ್ಕೆ ತರಬಾರದು ಎನ್ನುವ ಉದ್ದೇಶದಿಂದ ನಾವು ನಿಡಿ-1 ದಾಖಲೆಯನ್ನು ಹಾಜರು ಪಡಿಸಿಲ್ಲವೆಂದರೆ ಸರಿಯಲ್ಲ.

6. 4 ಮತ್ತು 5 ನೇ ವಾದಿಗಳಾದ ಗಂಗಮ್ಮ ಮತ್ತು ರೂಪಾ ಅವರು ನಿಡಿ-1 ದಾಖಲೆಯ ಪ್ರಕಾರ ಲಕ್ಷ್ಮಪ್ಪ ಸದರಿ ಆಸ್ತಿಗಳ ಸಂಪೂರ್ಣ ಮಾಲೀಕರು ಎಂದು ಒಪ್ಪಿ ದಾನ ಸ್ವೀಕಾರ ಮಾಡಿದ್ದಾರೆಂದರೆ ಸರಿ. ಆ ರೀತಿ ನಿಡಿ-1 ದಾಖಲೆಯ ಪ್ರಕಾರ ಹಿಸ್ಸೆ ಆಗಿದ್ದರಿಂದ ಬಡಾಸಂಗಾಪುರ ಗ್ರಾಮದ ಸರ್ವೇ ನಂಃ 55/1+2+3 ರ ಮೇಲೆ ಲಕ್ಷ್ಮಪ್ಪನ ಮಾಲೀಕತ್ವ ಬಂತು ಆದರೆ ಹೆಸರು

ಓ. ಎಸ್. ನಂಃ 84/2021

**ಪಿ.ಡಬ್ಲ್ಯೂಃ 1**

ಮಾತ್ರ ವೀರಪ್ಪನದು ಇತ್ತು ಎಂದರೆ ಸರಿಯಲ್ಲ. ನಮ್ಮ ಅಜ್ಜ ವೀರಪ್ಪ ತೀರಿಕೊಂಡ ಮೇಲೆ ಈ ಎಲ್ಲ ವಿಷಯಗಳು ನಮಗೆ ಗೊತ್ತಿದ್ದರಿಂದ ಲಕ್ಷ್ಮಪ್ಪನ ಹೆಸರು ಮಾತ್ರ ಸದರಿ ಆಸ್ತಿಗಳ ಕಂದಾಯ ದಾಖಲೆಗಳಲ್ಲಿ ಬಂದವು ಎಂದರೆ ಸರಿಯಲ್ಲ. ವೀರಪ್ಪ 2007 ರಲ್ಲಿ ಮೃತರಾದರೆಂದರೆ ಸರಿ. ಹೀಗಾಗಿ ವೀರಪ್ಪ 2007ರಲ್ಲಿ ತೀರಿಕೊಂಡ ಮೇಲೆ ಇದುವರೆಗೂ ನಾವಾಗಲೀ ನಮ್ಮ ಚಿಕ್ಕಮ್ಮನವರಾಗಲೀ ಸದರಿ ಆಸ್ತಿಯ ಕಂದಾಯ ದಾಖಲೆಗಳಲ್ಲಿ ವಾರಸಾ ಪ್ರಕಾರ ನಮ್ಮ ಹೆಸರನ್ನು ಹಚ್ಚಿಕೊಂಡಿಲ್ಲವೆಂದರೆ ಸರಿಯಲ್ಲ. ನಿಡಿ-1 ದಾಖಲೆಯ ಪ್ರಕಾರ ಆದ ಹಿಸ್ಸೆಯಂತೆ ಅವರೆಲ್ಲರೂ ಪ್ರತ್ಯೇಕ ಕಬ್ಜೆ ಪಡೆದುಕೊಂಡರು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೆ. ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 01-07-2026

ಸಹಿ/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್.ಸಿ,

ಹಿರೇಕೆರೂರು